**CC No. 1159/2023. DW-1.**

ಹೆಚ್ಚುವರಿ ಹಿರಿಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೀದರ

**ಸಿ.ಸಿ. ನಂ. 1159/2023**

ದಿ: **04-11-2024**
**DW-1**

ಸಾಕ್ಷಿಯ ಹೆಸರು : ಸೈಯದ ನಯೀಮ್
ತಂದೆಯ ಹೆಸರು : ಸೈಯದ ಹುಸೇನ್
ವಯಸ್ಸು : 63 ವರ್ಷ
ಉದ್ಯೋಗ : ವ್ಯವಹಾರ
ವಾಸಸ್ಥಳ : ಹೈದ್ರಾಬಾದ.

ಸಾಕ್ಷಿಯನ್ನು ಇಂದು ದಿ: 04-11-2024 ರಂದು ಕರೆಸಿ, ಪ್ರಮಾಣಿಕರಿಸಲಾಯಿತು.

**:-ಸಾಕ್ಷಿಯ ಮುಖ್ಯ ವಿಚಾರಣೆ ಆರೋಪಿ ಪರ ಎಸ್.ಕೆ. ವಕೀಲರಿಂದ:**

1. ನನಗೆ ಶಿವಾ ಎಂಬ ವ್ಯವಹಾರಿಕ ಪಾಲುದಾರ ಇದ್ದಾರೆ. ನನ್ನ ಚೆಕ್ ಗಳು ಅವನ ಬಳಿ ಇರುತ್ತವೆ ಮತ್ತು ಅವನ ಚೆಕ್ ಗಳು ನನ್ನ ಬಳಿ ಇರುತ್ತವೆ. ಫಿರ್ಯಾದಿ ಮತ್ತು ಸದರಿ ಶಿವಾ ಸ್ನೇಹಿತರು ಮತ್ತು ಸಂಬಂಧಿಕರು ಆಗಿರುತ್ತಾರೆ. ಯಾವುದೊ ಕಾರಣಕ್ಕೆ ಶಿವಾ ಮತ್ತು ಫಿರ್ಯಾದಿ ಹೈದ್ರಾಬಾದನ ಕಚೇರಿಯಲ್ಲಿ ಜಗಳವಾಡಿರುತ್ತಾರೆ. ಫಿರ್ಯಾದಿ 10-20 ಜನಗಳ ಜೊತೆಗೆ ಬಂದಿದ್ದರು. ಕಚೇರಿಯಲ್ಲಿದ್ದ ಟೇಬಲ್ ನಲ್ಲಿ ಚೆಕುಗಳ ಪೌಚ್ ನ್ನು ಫಿರ್ಯಾದಿ ತೆಗೆದುಕೊಂಡು ಹೋಗಿರುತ್ತಾನೆ. ನಾನು ಖಾಲಿ ಚೆಕ್ ಗಳ ಮೇಲೆ ಸಹಿ ಮಾಡಿ ಇಟ್ಟಿದ್ದೆ. ಅದರಲ್ಲಿ ಮೊತ್ತವನ್ನು ನಮೂದಿಸಿ ನನ್ನ ಮೇಲೆ ಈ ಫಿರ್ಯಾದಿಯನ್ನು ಸಲ್ಲಿಸಿದ್ದಾನೆ. ಕೋರ್ಟ್ ನಿಂದ ಸಮನ್ಸ್ ಬರುವವರೆಗೂ ನನಗೆ ಈ ಬಗ್ಗೆ ತಿಳಿದಿರಲಿಲ್ಲ.

2. ಆ ನಂತರ ನಾನು ಫಿರ್ಯಾದಿಯನ್ನು ನನ್ನ ಮೇಲೆ ಏಕೆ ದೂರು ಸಲ್ಲಿಸಿದ್ದಿ, ನೀನು ಶಿವಾನನ್ನು ಕೇಳಬೇಕು ಎಂದು ಹೇಳಿದ್ದೆ. ನಾವು

ಕುಳಿತು ಮಾತುಕತೆ ಮಾಡಬೇಕು ಎಂದು ಕೊಂಡಾಗ ನನಗೆ ಅಪಘಾತವಾಗಿರುತ್ತದೆ. ಆ ನಂತರ ಕರೋನಾ ವ್ಯಾಧಿ ಹರಡಿತ್ತು. ಈ ಹಂತದಲ್ಲಿ ವಿಳಂಬವಾಗಿದ್ದರಿಂದ ಫಿರ್ಯಾದಿ ಈ ದೂರನ್ನು ಸಲ್ಲಿಸಿದ್ದಾನೆ. ಫಿರ್ಯಾದಿ ನನಗೆ ಪರಿಚಯವಿಲ್ಲ.

ಫಿರ್ಯಾದಿ ಪರ ಎಂ.ಎಸ್. ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುತ್ತಾರೆ. ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಬೀದರ